ತಾನು ತಿಳಿಯದ ಯಾವುದನ್ನೋ ಬಯಸಿ, ಅವಳ ಪ್ರೇಮಲತೆ ಬಾಯಾರಿ ಕಾತರಿಸಿತು. ಲಲನೆಯು ಕನಸಿನಲ್ಲಿಯ ತನ್ನ ಅವಸ್ಥೆಗೆ ತಾನೇ ನಾಚಿದಳು. ಮತ್ತೊಮ್ಮೆ ತನ್ನ ವ್ಯರ್ಥ ಪೌರುಷವನ್ನು ನೋಡುತ್ತ ಕೋಪಗೊಂಡಳು! ಹೀಗೆ ಹೋರಾಡುತ್ತಿರಲು ಬೇರೊಂದು ಆಯಿತು:

ಪೂರ್ವದಿಕ್ಕಿನ ಬೆಟ್ಟದ ಮುಡಿಯ ಸುವರ್ಣ ಮಣಿಯಂತೆ ತಳತಳಿಸುತ್ತಿದ್ದ ಉದಯ ಸೂರ್ಯನ ಬಿಂಬದಿಂದ ಮೂಡಿ, ಉತ್ತಮ ಎಳೆಬಿಸಿಲಿನ ಸೊಬಗಿನಿಂದ ಹೊರ ಬಂದು, ಗಾಳಿಯ ಮಾರ್ಗದಲ್ಲಿ ಮೃದು ಮಧುರವಾಗಿ ಉಲ್ಲಾಸ ಸಂಭ್ರಮಗಳಿಂದ ಮಧು ಮದನರು (ವಸಂತ ಋತು ಮತ್ತು ಮನ್ಮಥ) ಅಮರ ತೇಜಸ್ಸಿನಿಂದ ತೇಲಿ ಬಂದರು!

ಆ ಪವಾಡದ ಮೇಲಿನ ಪವಾಡಕ್ಕೆ ಎದೆ ಬೆಚ್ಚಿ ಅಂಗನೆಯು ನಿದ್ದೆಯಿಂದ ಎಚ್ಚತ್ತು, ಕಣ್ಣು ತೆರೆದಳು. ಬಿಗಿದ ಹೊಂಗನಸಿನ ಆಲಿಂಗನದ ಬಂಧನವು ಒಡೆಯಿತು. ಅವಳು ವಿಸ್ಮಯದ ಮಂದಸ್ಮಿತದಲ್ಲಿ ಶಿವನನ್ನು ನೆನೆದಳು. ಗುಡಿಯ ವಿಗ್ರಹಕ್ಕೆ ದೃಢಭಕ್ತಿಯಿಂದ ಶಿರಬಾಗಿ ಕೈಮುಗಿದಳು. ಆಲಯದ ಎದುರಿನಲ್ಲಿ, ಉಷೆಯ ನಗೆನಸುಕಿನಲ್ಲಿ ಮನೋಹರವಾಗಿ ಕಂಗೊಳಿಸುತ್ತಿರುವ ಕೊಳದ ತೀರಕ್ಕೆ ನಡೆದಳು.

ಆ ದಿನ ಮೂಡಲ ಪ್ರದೇಶದಲ್ಲಿ ಪೂರ್ವವಧು ಕೊಂಚ ಕಣ್ಣು ತೆರೆದಂತೆ ಕೆಂಗಾಂತಿ ಚಿಗುರಿತು. ಅವಳ ಹಣೆಯಲ್ಲಿ ತಾರೆಯೊಂದು ವಜ್ರದ ಕಿಡಿಯಂತೆ ಕಂಗೊಳಿಸುತ್ತಿತ್ತು. ರಾತ್ರಿರತಿಯು ತನ್ನ ಆಯಸ್ಸು ಕಳೆದು ಹೋಗುತ್ತಿರುವುದನ್ನು ನೆನೆದು ನಡುಗಿದಳು. ಇರುಳಿನ ನಿದ್ದೆಯಿಂದ ಜಗತ್ತು ಎಚ್ಚರಗೊಳ್ಳುವ ಆ ಸಮಯ ಶಾಂತಿಯಿಂದ, ಶೈತ್ಯದಿಂದ, ನಾದಗರ್ಭಿತವಾದ ತುಂಬು ಮೌನದಿಂದ, ಧ್ಯಾನಮಯ ಗಾಂಭೀರ್ಯದಿಂದ ಶೋಭಿಸಿತು.

ಕಾಂತಿಯನ್ನು ಬೀರುವಾಗ ಆಗಸದಲ್ಲಿ ತಿಳಿಕೆಂಪು, ನಸುಗೆಂಪು, ಹೂಗೆಂಪು, ಕಡುಗೆಂಪು, ಹಳದಿ, ಕುಂಕುಮ, ಪೀತ ಕನಕ, ಚಂದನ ನೀಲ ವರ್ಣೋಪವರ್ಣಗಳು ಮೂಡಿ ಬಂದವು. ಅವು ನೊರೆಗುಳ್ಳೆಗಳಂತಹ ಜ್ವಾಲೆಯಂತೆ ಕೆಂಪಾದ ಮೇಘಮಾಲೆಗಳಾಗಿ ವಿವಿಧ ವಿನ್ಯಾಸದಲ್ಲಿ ಸಾಲು ಸಾಲುಗಳಾಗಿ ಹೊರ ಹೊಮ್ಮಿದವು. ಅದು ವಿಶಾಲವಾದ ರಾತ್ರಿಯ ಪಾತ್ರೆಯಂಚಿನಲ್ಲಿ ಹಗಲೆಂಬುವುದು ತಕಪಕನೆ ಕುದಿದೆದ್ದಿತೊ ಎನ್ನುವಂತಿತ್ತು! ಆ ಸುಂದರವಾದ ದಿನೋದಯನ ದಿವ್ಯ ಪ್ರಭಾತ ಕಾವ್ಯವು ಕಣ್ಣಿಗೆ ರಂಜಿಸಿತು!

ಚಿತ್ರಾಂಗದೆಯ ಮನಕ್ಕೆ ಹಸುರು ಕಡಲಿನ ಹಿರಿದಾದ ತೆರೆಗಳಂತೆ ಸ್ಪರ್ಧೆಯಲ್ಲಿ ಎದ್ದು ಅಲೆ ಅಲೆಗಳಾಗಿ ಪೂರ್ವ ದಿಗಂತವನ್ನು ತಬ್ಬಿ ನಾನಾ ದಿಕ್ಕಿಗೆ ಹಬ್ಬಿದ ವನಶ್ರೇಣಿಯ ಚೆಲುವಾಯಿತು. ಅವಳಿಗೆ ಅದು ತನ್ನೆದೆಯಲ್ಲಿ ಆಗತಾನೆ ಅರಳಿದ ನವಯೌವನ ಪ್ರಸಾದದಂತೆ ವಿಸ್ತಾರವಾಗಿ ಆಹ್ಲಾದಕರವಾಗಿತ್ತು.

ರಮ್ಯ ಅರುಣಜ್ಯೋತಿಯು ಕೊಳದ ಜಲದಲ್ಲಿ ಪ್ರತಿಬಿಂಬಿಸಿ ನೀರು ಉರಿಯುವ ರೀತಿ ಹೊಳೆಯುತ್ತಿರಲು ನೈದಿಲೆ ಬಳ್ಳಿ ಕುಮುದಿನಿಯ ಮುಖ ಬಾಡಿತು. ಕಮಲಪುಷ್ಪದಲ್ಲಿ ನಗೆ ಮೂಡಿತು. ಪಕ್ಷಿಗಳನ್ನು ಎಚ್ಚರಿಸುವಂತೆ ಗಾಳಿ ತೀಡಿತು. ಆಗ ಮಡಿವಾಳದ ಮಧುರವಾದ ಸಿಳ್ಳು, ಕಾಜಾಣದ ಇಂಚರ, ಕೋಗಿಲೆಯ ನಿಡುಸರ (ದೀರ್ಘಧ್ವನಿ), ಗಿಳಿವಿಂಡುಗಳ ಗಳಹು, ತರತರಹದ ಪಕ್ಷಿಗಳ ವಿವಿಧ ಕುಕಿಲುಗಳ ಗಡಿಬಿಡಿಯ ತುಮುಲವು ಸುಮಧುರವಾಗಿ ಚೈತ್ರ ಪ್ರಭಾತವನ್ನು ದಟ್ಟ ಧ್ವನಿಯಾಗಿಸಿದವು.

ವನ ವನಿತೆಯು ತನ್ನ ಸ್ನೇಹದ ವಸಂತೋದಯದ ಆನಂದದಿಂದ ಹರ್ಷದ ಕಣ್ಣೀರನ್ನು ಸುರಿಸುವಂತೆ, ಮರಗಳ ಕುರುಚಲುಗಿಡ (ಗುಲ್ಮ)ಗಳ ಎಲೆಗಳಿಂದ ಹನಿಗಳು ಉದುರಿದವು. ಹೂ ಸಮೂಹವು ದಳಗಳನ್ನು ಅರಳಿಸಿ ನರುಗಂಪಿನಿಂದ ನಲಿದವು. ತುಂಬಿ ಭ್ರಮರಗಳು ಹಿಂಡು ಹಿಂಡಾಗಿ ಬಂದು ಹೂವಿನ ಒಡಲ ಹೂದೂಳಿಯಲ್ಲಿ ಹೊಂಬಣ್ಣಗೊಂಡವು. ಹೂವಿಂದ ಹೂವಿಗೆ ಹಾರಿ ಮಕರಂದ ಭಿಕ್ಷೆಯನ್ನು ಬೇಡಿದವು. ಅವು ಕುಟಜ (ಬೆಟ್ಟ ಮಲ್ಲಿಗೆ) ಗಳಲ್ಲಿ ನಿತ್ಯ ಯಾತ್ರೆಯ ಓಂಕಾರವನ್ನು ಝೇಂಕರಿಸಿದವು.

ನಾರಿಯ ಆಕೃತಿಯಂತೆ ಕಾಣುವ ಉಷಾ ಶ್ರೀಕಾಂತೆಯು ವೈವಿಧ್ಯಮಯ ಮನುಜ ಜೀವನ ರಸದ ಬಯಕೆಯಿಂದ ಭೂಮಿಯ ವಿಹಾರಕ್ಕೆ ಬಂದಳೊ ಎನ್ನಿಸುವಂತೆ – ಮಣಿಪುರ ಅರಸ ಚಿತ್ರವಾಹನನ ಮಗಳು ಚಿತ್ರಾಂಗಿಯು ನಡೆಯುತ್ತಿದ್ದಳು. ಅವಳು ಕೆರೆಯ ಅಂಚಿನಲ್ಲಿ ನಳನಳಿಸಿ ಬೆಳೆದ ಎಳೆಹಸುರು ಹುಲ್ಲಿನ ಮೇಲೆ ಮೆಲ್ಲನೆ ನಡೆದಳು. ಅದು ಎಳೆಬಿಸಿಲಿನಲ್ಲಿ ಮುತ್ತು ಚೆಲ್ಲಿದ ರೀತಿ ಮೂಡಿದ ಮಿರುಗುವ ಇಬ್ಬನಿಗಳನ್ನು ಹೂವಿನಂತಹ ಪಾದಗಳಿಂದ ಸವರಿ, ಭೂಮಿಯ ಹೃದಯ ನಲಿದು ಹಿಗ್ಗುವ ರೀತಿ ಮುತ್ತಿಟ್ಟಂತಿತ್ತು!

ಆ ಷೋಡಶ ಕಳಾಪೂರ್ಣಳಾದ ಹದಿನಾರು ವಯಸ್ಸಿನ ಯುವತಿ ಕಾಡಿನ ಮಾರ್ಗದಲ್ಲಿ ವೀರ ವಯ್ಯಾರದಲ್ಲಿ ಸಾಗುತ್ತಿದ್ದಳು. ಅವಳಿಗೆ ಆ ಹಾದಿಯ ಗಿಡಮರಗಳು ಹೂವಿನ ಮಳೆಗರೆದವು. ಹೂಬಳ್ಳಿಗಳು ಉದ್ದಕ್ಕೆ ಚಾಚಿಕೊಂಡಿರುವ ಕುಡಿಗಳಿಂದ ಕೋಮಲೆಯ ನುಣುಪಾದ ಕೆನ್ನೆಯ ಮೇಲೆ ಪ್ರೀತಿಯಿಂದ ಕೈಯಾಡಿಸಿದವು. ಪಕ್ಷಿಗಳು ಏಕಕಂಠದಿಂದ ಜಯದನಿ ಮಾಡುತ್ತ, ರೆಕ್ಕೆ ಗರಿಗೆದರಿ ಉತ್ಸಾಹದಿಂದ ಹಾರಾಡಿದವು!

## ಧ್ಯಾನಸ್ಥ ಮಾನವ ಪ್ರತಿಚ್ಛಾಯೆ

ಹೀಗೆ ಉದಯ ಸಮಯದ ಸಂಪತ್ತನ್ನು ಸವಿಯುತ್ತಿರುವ ಅಂಗನೆ ಆಶ್ಚರ್ಯಕ್ಕೊಳಗಾದ ದೃಷ್ಟಿಯನ್ನು ದೂರಕ್ಕೆ ಹರಿಸುತ್ತ, ತಟ್ಟನೆ ನಿಂತಳು. ಅವಳಿಗೆ ಅಭಿಮುಖವಾಗಿ ಎದುರು ದಡದ ಒಂದು ಬಂಡೆಯ ಮೇಲೆ, ನೆರಳಿನ ಮುಂಭಾಗದಲ್ಲಿ ಪ್ರತಿಫಲಿಸುವ ಅಂಬರಕ್ಕೆ



ಕನ್ನಡ ಭಾಷೆಯ ಪುಣ್ಯವಿಶೇಷ ಕುವೆಂಪು. ಸಾಹಿತ್ಯ ಮತ್ತು ವಿಚಾರಗಳಿಂದ 'ಆಧುನಿಕ ಕರ್ನಾಟಕ'ಕ್ಕೆ ವೈಚಾರಿಕ ಸಂವಿಧಾನವನ್ನು ರೂಪಿಸಿಕೊಟ್ಟ ಯುಗದ ಕವಿ ಅವರು. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ, 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡಿತಿ' ಮಹಾಕಾದಂಬರಿಗಳು ಕುವೆಂಪು ಮೇರುಪ್ರತಿಭೆಯ ಕಲಶಪ್ರಾಯ ಅಭಿವ್ಯಕ್ತಿಗಳು. ಮಹಾಭಾರತದ ಅಗಣಿತ ಪಾತ್ರಗಳಲ್ಲಿ ಕೋಲ್ಮಿಂಚಿನಂತೆ ಸುಳಿದುಹೋಗುವ ಮಣಿಪುರದ ಯುವರಾಣಿ ಚಿತ್ರಾಂಗದೆಯನ್ನು ಕುರಿತು ಅವರು ರಚಿಸಿರುವ 'ಚಿತ್ರಾಂಗದಾ' ಕನ್ನಡ ಸಾಹಿತ್ಯದ ಅಪರೂಪದ ಪ್ರೇಮಕಾವ್ಯಗಳಲ್ಲೊಂದು. ಅರ್ಜುನ ಮತ್ತು ಚಿತ್ರಾಂಗದೆಯ ಪ್ರೇಮಕಥನ ಕುವೆಂಪು ಸೃಜನಶೀಲತೆಯಲ್ಲಿ ಅರಳಿದ ಸ್ವತಂತ್ರ ಕೃತಿ. ಆ ಕೃತಿಯನ್ನೀಗ ಹೊಸಗಾಲದ ಓದುಗರಿಗೆ ಸುಲಭಗ್ರಾಹ್ಯವಾಗುವಂತೆ ಜಿ. ಕೃಷ್ಣಪ್ಪನವರು ಸರಳಗನ್ನಡದಲ್ಲಿ ನಿರೂಪಿಸಿದ್ದಾರೆ.



ಬೆಂಗಳೂರಿನ ಜಿ. ಕೃಷ್ಣಪ್ಪನವರು ಕನ್ನಡ ಸಾಹಿತ್ಯ ವಲಯದಲ್ಲಿ 'ಬೇಂದ್ರೆ ಕೃಷ್ಣಪ್ಪ' ಎಂದೇ ಪರಿಚಿತರು. 'ಡಾ. ಜಿ.ಪಿ. ರಾಜರತ್ನಂ ಕನ್ನಡ ಸಾಹಿತ್ಯ ಪರಿಚಾರಕ ಪ್ರಶಸ್ತಿ', 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ' ಸೇರಿದಂತೆ ಹಲವು ಗೌರವಗಳಿಂದ ಪುರಸ್ಕೃತರು. ಬೇಂದ್ರೆ ಕಾವ್ಯದ ಸಖ್ಯದಲ್ಲಿ, ಹೊಸ ತಲೆಮಾರಿಗೆ ವರಕವಿಯ ಕಾವ್ಯದ ಘಮವನ್ನು ಪರಿಚಯಿಸುವ ಸಾಹಿತ್ಯ ಪರಿಚಾರಿಕೆಯಲ್ಲಿ ನಿರತರು. 'ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀ: ಒಂದು ಅಧ್ಯಯನ' ಪ್ರೌಢಪ್ರಬಂಧಕ್ಕೆ ಪಿಎಚ್‌.ಡಿ. ಪದವಿ ಪಡೆದಿರುವ ಅವರು, ಬೇಂದ್ರೆ ಕಾವ್ಯದ ವಿಮರ್ಶಕರಾಗಿ ಮಾಡಿರುವ ಕೆಲಸ ಬಹು ಮುಖ್ಯವಾದುದು. ಇದೀಗ ಕುವೆಂಪು ಸಾಹಿತ್ಯ ಸರೋವರದಲ್ಲಿ ವಿಹರಿಸುತ್ತಿರುವ ಕೃಷ್ಣಪ್ಪನವರು, 'ಚಿತ್ರಾಂಗದಾ' ಕೃತಿಯನ್ನು ಸರಳಗನ್ನಡದಲ್ಲಿ 'ಸುಧಾ' ಸಹೃದಯರಿಗೆ ದಾಟಿಸುತ್ತಿದ್ದಾರೆ. ಈ ಮುನ್ನ ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಹಾಗೂ 'ಗಿರಿಜಾ ಕಲ್ಯಾಣ'ಗಳನ್ನು 'ಸುಧಾ' ಓದುಗರಿಗೆ ಪರಿಚಯಿಸಿದ ಹಿರಿಮೆ ಅವರದು.